11/1

# 2010

## LAW

### Paper 1

*Time : 3 Hours ]* *[ Maximum Marks : 300*

---

**INSTRUCTIONS**

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

4×5=20

*Answer each question in about 50 words. Each question carries 5 marks.*

1. (a) Explain "Theory of Territorial Nexus".

   (b) Explain Jus cogens & Vienna Convention.

   (c) Explain constitutive theory of recognition.

   (d) Explain "Double Jeopardy".

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) "ಪ್ರಾದೇಶಿಕ ಗುಂಪಿನ ಸಿದ್ಧಾಂತ" (Territorial Nexus) ವನ್ನು ವಿವರಿಸಿ.

   (ಬಿ) Jus Cogens ಮತ್ತು ವಿಯೆನ್ನಾ ಒಡಂಬಡಿಕೆಯನ್ನು ವಿವರಿಸಿ.

   (ಸಿ) ಮಾನ್ಯತೆಯ ರಚನಾತ್ಮಕ ಸಿದ್ಧಾಂತವನ್ನು ವಿವರಿಸಿ.

   (ಡಿ) "ಇಮ್ಮಡಿ ವಿಪತ್ತು" ಎಂದರೇನು ? ವಿವರಿಸಿ.

[Turn over

## PART B

*10×10=100*

*Answer each question in about 100 words. Each question carries 10 marks.*

2. Explain 'Neutrality'. State the Rights and Duties of Neutral States and Belligerent States.

3. Examine the provisions and effectiveness of the Anti-Aircraft hijacking conventions in providing free aerial navigation.

4. Write a short note on doctrine of '*Rebus sic Stantibus*' in Treaty Law.

5. Discuss the power of States to restrict the freedom of trade and commerce in their territories in the light of recent judicial decisions.

6. The doctrines of "pith and substance" and the "colourable legislation" have helped in interpreting the entries in various lists and have promoted harmony among the states and union.' Comment.

7. The controversy among jurists about the sources of International Law was settled under Article 38 of the Statute of ICJ. Clearly state the sources formally referred to in Article 38.

8. Discuss the protection to commercial advertisements under Article 19(1)(a).

9. Discuss the contingencies under which an ordinance may be promulgated. State the duration of an Ordinance. Also mention any limitations on exercise of this power.

10. 'Since the Law of Nations primarily deals with relations between states, the states are the only subjects of International Law'. Critically examine.

11. Discuss the views of Supreme Court on pardoning power of President and Governor.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

2. 'ತಾಟಸ್ಥ್ಯ' ಎಂದರೇನು ? ತಟಸ್ಥ ದೇಶಗಳು ಮತ್ತು ಆಕ್ರಮಣಶೀಲ ದೇಶಗಳ ಹಕ್ಕು ಮತ್ತು ಕರ್ತವ್ಯಗಳನ್ನು ನಿರೂಪಿಸಿ.

3. ಮುಕ್ತ ವಾಯುಯಾನ ಸೌಲಭ್ಯವನ್ನು ಒದಗಿಸುವಲ್ಲಿ, ವಿಮಾನ ಅಪಹರಣ ವಿರೋಧಿ ಒಡಂಬಡಿಕೆಗಳ ಅವಕಾಶಗಳು ಮತ್ತು ಪರಿಣಾಮಕತ್ವವನ್ನು ಕುರಿತು ವಿವೇಚಿಸಿ.

4. ಒಪ್ಪಂದದ ಕಾನೂನಿನಲ್ಲಿ (Treaty law) *'Rebus sic Stantibus'* ಸಿದ್ಧಾಂತ ಕುರಿತು ಒಂದು ಕಿರುಟಿಪ್ಪಣಿ ಬರೆಯಿರಿ.

5. ಇತ್ತೀಚಿನ ನ್ಯಾಯಿಕ ನಿರ್ಧಾರಗಳ ಹಿನ್ನೆಲೆಯಲ್ಲಿ, ತಮ್ಮ ಪ್ರದೇಶದಲ್ಲಿನ ವ್ಯಾಪಾರ ಹಾಗೂ ವಾಣಿಜ್ಯದ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯಗಳಿಗಿರುವ ಅಧಿಕಾರವನ್ನು ಕುರಿತು ಚರ್ಚಿಸಿ.

6. "'Pith and substance' ಮತ್ತು 'colourable legislation' ಸಿದ್ಧಾಂತಗಳು ವಿವಿಧ ಸೂಚಿಗಳಲ್ಲಿನ ನಮೂದುಗಳನ್ನು ವ್ಯಾಖ್ಯಾನಿಸುವುದಕ್ಕೆ ಸಹಾಯಕವಾಗಿವೆ ಮತ್ತು ರಾಜ್ಯಗಳು ಹಾಗೂ ಕೇಂದ್ರದ ನಡುವೆ ಸಾಮರಸ್ಯವನ್ನು ಹೆಚ್ಚಿಸಿವೆ." ಈ ಕುರಿತು ನಿಮ್ಮ ಅಭಿಪ್ರಾಯವೇನು ?

7. ಅಂತರರಾಷ್ಟ್ರೀಯ ಕಾನೂನಿನ ಆಕರಗಳನ್ನು ಕುರಿತಂತೆ ನ್ಯಾಯವೇತ್ತರ ನಡುವೆ ಇದ್ದಂತಹ ವಿವಾದವನ್ನು ICJ ಯ ಪರಿನಿಯಮದ 38ನೇ ಅನುಚ್ಛೇದದ ಅನ್ವಯ ಇತ್ಯರ್ಥಗೊಳಿಸಲಾಯಿತು. 38ನೇ ಅನುಚ್ಛೇದದಲ್ಲಿ ಔಪಚಾರಿಕವಾಗಿ ಉಲ್ಲೇಖಿಸಲಾದ ಆಕರಗಳು ಯಾವುವು ಎಂಬುದನ್ನು ಸ್ಪಷ್ಟವಾಗಿ ತಿಳಿಸಿ.

8. ವಾಣಿಜ್ಯ ಜಾಹಿರಾತುಗಳಿಗೆ 19(1)(a) ಅನುಚ್ಛೇದದ ಅಡಿಯಲ್ಲಿ ನೀಡಿರುವ ರಕ್ಷಣೆಯನ್ನು ಕುರಿತು ಚರ್ಚಿಸಿ.

9. ಒಂದು ಸುಗ್ರೀವಾಜ್ಞೆಯನ್ನು ಯಾವ ಅನಿಶ್ಚಿತ ಸಂದರ್ಭಗಳಲ್ಲಿ ಘೋಷಿಸಬಹುದು ಎಂಬುದನ್ನು ಚರ್ಚಿಸಿ. ಸುಗ್ರೀವಾಜ್ಞೆ ಎಷ್ಟು ಅವಧಿಯವರೆಗೆ ಜಾರಿಯಲ್ಲಿರಬಹುದು ತಿಳಿಸಿ ಮತ್ತು ಈ ಅಧಿಕಾರ ಚಲಾಯಿಸುವುದಕ್ಕೆ ಏನಾದರೂ ಪರಿಮಿತಿಗಳಿವೆಯೆ ಎಂಬುದನ್ನು ತಿಳಿಸಿ.

10. ರಾಷ್ಟ್ರಗಳ ಕಾನೂನು, ಮೂಲತ: ರಾಜ್ಯಗಳ ನಡುವಿನ ಸಂಬಂಧ ಕುರಿತಂತೆ ವ್ಯವಹರಿಸುವುದರಿಂದ, ರಾಜ್ಯಗಳು ಕೇವಲ ಅಂತರರಾಷ್ಟ್ರೀಯ ಕಾನೂನಿನ ಅಧೀನಕ್ಕೊಳಪಟ್ಟಂಥವಾಗಿವೆ. ಈ ಹೇಳಿಕೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

11. ರಾಷ್ಟ್ರಪತಿ ಮತ್ತು ರಾಜ್ಯಪಾಲರುಗಳಿಗೆ ಇರುವ ಕ್ಷಮಾದಾನದ ಅಧಿಕಾರ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ದೃಷ್ಟಿ ಏನು ಎಂಬುದನ್ನು ಚರ್ಚಿಸಿ.

[Turn over

## PART C

*6×15=90*

*Answer each question in about 150 words. Each question carries 15 marks.*

**12.** State the various theories regarding the relationship between International Law and Municipal Law.

**13.** Discuss provisions relating to 'use of force' against another member state and its use in 'domestic jurisdiction' under Article 2(7) of U.N. Charter.

**14.** Discuss the limits of the amending power of Parliament.

**15.** What is the scope and content of the phrase 'reasonable opportunity of being heard' in respect of the charges in Article 311(2) of the Constitution of India ? Does it embrace a right to receive a copy of the Inquiry Officer's report ? State the Case Law on the subject.

**16.** Describe the constitutional provisions relating to Reservation in Promotions.

**17.** "The exclusive economic zone is *sui generis* and also modifies the regime of the high seas over which it extends." Critically examine this statement drawing attention to the special features and legal incidents of this new maritime zone as established by the U.N. Convention on the Law of Sea, 1982.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಅಂತರರಾಷ್ಟ್ರೀಯ ಕಾನೂನು ಮತ್ತು ಮುನಿಸಿಪಲ್ ಕಾನೂನುಗಳ ಸಂಬಂಧ ಕುರಿತಂತೆ ಇರುವ ವಿವಿಧ ಸಿದ್ಧಾಂತಗಳನ್ನು ತಿಳಿಸಿ.

**13.** ಇನ್ನೊಂದು ಸದಸ್ಯ ರಾಜ್ಯದ ವಿರುದ್ಧ "ಬಲಪ್ರಯೋಗದ ಬಳಕೆ"ಗೆ ಸಂಬಂಧಿಸಿದಂತೆ ಮತ್ತು ದೇಶೀಯ ಅಧಿಕಾರವ್ಯಾಪ್ತಿಯಲ್ಲಿ ಅದರ ಬಳಕೆಯನ್ನು ಕುರಿತಂತೆ, ವಿಶ್ವಸಂಸ್ಥೆಯ ಪ್ರಣಾಳಿಕೆಯ 2(7)ನೇ ಅನುಚ್ಛೇದದ ಅಡಿಯಲ್ಲಿರುವ ಅವಕಾಶಗಳನ್ನು ಚರ್ಚಿಸಿ.

**14.** ಸಂಸತ್ತಿನ ತಿದ್ದುಪಡಿ ಅಧಿಕಾರದ ಮಿತಿಗಳನ್ನು ಕುರಿತು ಚರ್ಚಿಸಿ.

**15.** ಭಾರತೀಯ ಸಂವಿಧಾನದ 311(2) ನೇ ಅನುಚ್ಛೇದದಲ್ಲಿನ ಆರೋಪಣೆಗಳಿಗೆ ಸಂಬಂಧಿಸಿದಂತೆ, "ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಸೂಕ್ತ ಅವಕಾಶ" ಎಂಬ ಪದಗುಚ್ಛದ ವ್ಯಾಪ್ತಿ ಹಾಗೂ ವಿಷಯ ಏನು ? ವಿಚಾರಣಾ ಅಧಿಕಾರಿಯ ವರದಿಯ ಒಂದು ಪ್ರತಿಯನ್ನು ಪಡೆದುಕೊಳ್ಳುವ ಹಕ್ಕನ್ನೂ ಇದು ಒಳಗೊಳ್ಳುವುದೆ ? ಈ ವಿಷಯ ಕುರಿತಂತೆ ಇರುವ ಕಾನೂನು ಪ್ರಕರಣವನ್ನು (Case law) ತಿಳಿಸಿ.

**16.** ಪದೋನ್ನತಿಯಲ್ಲಿ ಮೀಸಲಾತಿ ನೀಡಿಕೆಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿರುವ ಅವಕಾಶಗಳನ್ನು ವಿವರಿಸಿ.

**17.** ಪ್ರತ್ಯೇಕ ಆರ್ಥಿಕ ವಲಯವು *sui generis* ಮತ್ತು ಅದು ಯಾವುದರ ಮೇಲೆ ವ್ಯಾಪಿಸುತ್ತದೆಯೋ ಆ ಸಮುದ್ರದ ಪ್ರಭುತ್ವವನ್ನು ಮಾರ್ಪಡಿಸುತ್ತದೆ. ಕಡಲಿನ ನಿಯಮಗಳನ್ನು ಕುರಿತಂತೆ ವಿಶ್ವಸಂಸ್ಥೆಯ ಒಡಂಬಡಿಕೆ 1982 ರಲ್ಲಿ ನಿರೂಪಿಸಲಾದ ಪ್ರಕಾರ, ಈ ಹೊಸ ಸಮುದ್ರ ಯಾನಕ್ಕೆ ಸಂಬಂಧಿಸಿದ ವಿಶೇಷ ಸ್ವರೂಪ ಮತ್ತು ಕಾನೂನು ಪ್ರಸಂಗಗಳತ್ತ ಗಮನ ಸೆಳೆಯುವುದರೊಂದಿಗೆ ಈ ಹೇಳಿಕೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

[Turn over

## PART D

*3×30=90*

*Answer any **three** of the following questions, each in about 300 words. Each question carries 30 marks.*

**18.** "India has established a secular state where individual's liberty and equality is placed above religion." Elucidate.
Can a Law prohibit religious conversions achieved by use of fraud, force or allurement being violative of right to propagate religion guaranteed under Article 25 of the Constitution ?

**19.** (a) "The Indian Constitution is a classic case of maintaining a balance between purely federal and purely unitary type of government." Discuss.

(b) State the procedure of the appointment of the judges of the Supreme Court and the High Courts and the rules on the transferability of High Court judges.

**20.** (a) State the rules of natural justice and the effect of their non-observance. Should "administrative inconvenience" be allowed to block the path of natural justice ? Comment.

(b) 'Henry VIII clause has been an illustration of excessive delegation which can't be done, but India is using its narrower version.' Discuss.

**21.** (a) Is the threat or use of nuclear weapons in any circumstances permitted under International law ? Answer the question in the light of the Advisory opinion of the ICJ dated $8^{th}$ July 1996.

(b) State the distinction between recognition of a 'State' and a 'Government'. Discuss whether there is a duty to recognize.

**22.** (a) Define extradition. State the essential conditions for extradition. What is the relationship of 'Extradition' with 'Asylum' ?

(b) Explain State succession mentioning the difference between Universal and Partial succession.

## ಭಾಗ D

3×30=90

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** "ಭಾರತವು ಜಾತ್ಯಾತೀತ ರಾಜ್ಯವನ್ನು ಸ್ಥಾಪಿಸಿದ್ದು, ಇಲ್ಲಿ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಧರ್ಮಕ್ಕಿಂತ ಮೇಲಿನ ಸ್ಥಾನದಲ್ಲಿರಿಸಲಾಗಿದೆ." ಇದನ್ನು ವಿವರಿಸಿ.
ಸಂವಿಧಾನದ 25ನೇ ಅನುಚ್ಛೇದದ ಅಡಿಯಲ್ಲಿ ಧರ್ಮಪ್ರಸಾರ ಮಾಡಲು ನೀಡಲಾಗಿರುವ ಹಕ್ಕನ್ನು ಉಲ್ಲಂಘಿಸುವ ವಂಚನೆ, ಬಲಾತ್ಕಾರ ಅಥವಾ ಆಮಿಷಗಳ ಮೂಲಕ ಮಾಡಲಾಗುವ ಧಾರ್ಮಿಕ ಮತಾಂತರಗಗಳನ್ನು ಕಾನೂನಿನ ಮೂಲಕ ನಿಷೇಧಿಸಬಹುದೇ ?

**19.** (ಎ) "ಭಾರತೀಯ ಸಂವಿಧಾನವು, ಶುದ್ಧ ಒಕ್ಕೂಟ ರೂಪದ ಹಾಗೂ ಶುದ್ಧ ಏಕೀಕೃತ ರೂಪದ ಸರ್ಕಾರದ ನಡುವೆ ಸಮತೋಲನವನ್ನು ಸ್ಥಾಪಿಸುವ ಶ್ರೇಷ್ಠ ಉದಾಹರಣೆಯಾಗಿದೆ." ಚರ್ಚಿಸಿ.

(ಬಿ) ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳನ್ನು ನೇಮಕ ಮಾಡುವ ವಿಧಾನವನ್ನು ವಿವರಿಸಿ ಮತ್ತು ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರುಗಳ ವರ್ಗಾವಣೆಗೆ ಸಂಬಂಧಿಸಿದ ನಿಯಮಗಳನ್ನು ತಿಳಿಸಿ.

**20.** (ಎ) ಸಾಮಾನ್ಯ ನ್ಯಾಯದ ನಿಯಮಗಳನ್ನು ಮತ್ತು ಇದನ್ನು ಅನುಸರಿಸದಿದ್ದರೆ ಆಗುವ ಪರಿಣಾಮಗಳನ್ನು ತಿಳಿಸಿ. ಸಾಮಾನ್ಯ ನ್ಯಾಯದ ಮಾರ್ಗಕ್ಕೆ ತಡೆ ಒಡ್ಡಲು "ಆಡಳಿತಾತ್ಮಕ ತೊಂದರೆ"ಗಳಿಗೆ ಅವಕಾಶ ಕೊಡಬೇಕೆ ? ನಿಮ್ಮ ಅಭಿಪ್ರಾಯವೇನು ?

(ಬಿ) "ಹೆನ್ರಿ VIII ರ ವಾಕ್ಯಾಂಶವು ಅತಿರೇಕದ ಪ್ರತ್ಯಾಯೋಜನೆಯ ನಿದರ್ಶನವಾಗಿದ್ದು ಅದನ್ನು ಮಾಡಲು ಸಾಧ್ಯವಿಲ್ಲ. ಆದರೆ ಭಾರತವು ಅದರ ಸಂಕುಚಿತ ರೂಪವನ್ನು ಬಳಸುತ್ತಿದೆ ?" ಚರ್ಚಿಸಿ.

**21.** (ಎ) ಯಾವುದೇ ಸಂದರ್ಭದಲ್ಲಿ ಅಣ್ವಸ್ತ್ರಗಳ ಭೀತಿಯನ್ನೊಡ್ಡುವುದಕ್ಕೆ ಅಥವಾ ಪ್ರಯೋಗಿಸುವುದಕ್ಕೆ ಅಂತರರಾಷ್ಟ್ರೀಯ ಕಾನೂನಿನ ಅಡಿಯಲ್ಲಿ ಅನುಮತಿ ಇದೆಯೆ ? 1996 ಜುಲೈ 8 ರಲ್ಲಿ ICJ ನೀಡಿದ ಸಲಹಾ ಅಭಿಪ್ರಾಯದ ಹಿನ್ನೆಲೆಯಲ್ಲಿ ಈ ಅಂಶವನ್ನು ಚರ್ಚಿಸಿ.

(ಬಿ) 'ರಾಜ್ಯದ' ಮಾನ್ಯತೆ ಮತ್ತು 'ಸರ್ಕಾರವೊಂದರ' ಮಾನ್ಯತೆಯ ನಡುವಿನ ವ್ಯತ್ಯಾಸವನ್ನು ತಿಳಿಸಿ. ಮಾನ್ಯತೆ ನೀಡುವುದು ಕರ್ತವ್ಯವೆ ? ಎಂಬುದನ್ನು ಚರ್ಚಿಸಿ.

**22.** (ಎ) ಪ್ರತ್ಯರ್ಪಣ ಎಂದರೇನು ? ವಿವರಿಸಿ. ಪ್ರತ್ಯರ್ಪಣಕ್ಕೆ ಅವಶ್ಯವಾದ ಷರತ್ತುಗಳನ್ನು ತಿಳಿಸಿ. 'ಪ್ರತ್ಯರ್ಪಣಕ್ಕೂ' 'ರಕ್ಷಣಾಲಯ'ಕ್ಕೂ ಇರುವ ಸಂಬಂಧವೇನು ?

(ಬಿ) ಸಂಪೂರ್ಣ ಉತ್ತರಾಧಿಕಾರ ಮತ್ತು ಭಾಗಶಃ ಉತ್ತರಾಧಿಕಾರಗಳ ನಡುವಿನ ವ್ಯತ್ಯಾಸವನ್ನು ತಿಳಿಸುತ್ತ ರಾಜ್ಯ ಉತ್ತರಾಧಿಕಾರವನ್ನು ವಿವರಿಸಿ.

11/1

# 2010

## ಕಾನೂನು

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

SEAL

### ಸೂಚನೆಗಳು

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

**Note :** *The English version of the instructions is printed on the front cover of this question paper.*

11/2

# 2010

## LAW

## Paper 2

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) 'A' who is a citizen of United States was travelling in a ship registered in India. During the voyage 'A' kills 'B', a resident of U.K. Can A be punished in an Indian Court ?

   (b) What is the difference between "offer" and "invitation to offer" under Law of Contract ?

   (c) 'A' offers to sell a horse to 'B' at a price of ₹ 500 or ₹ 1,000 ? Is this contract enforceable ?

   (d) Define *damnum sine injuria*.

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಸಂಯುಕ್ತ ಸಂಸ್ಥಾನದ ಪ್ರಜೆಯಾದ 'A' ಎಂಬಾತನು ಭಾರತದಲ್ಲಿ ನೋಂದಣಿಯಾಗಿರುವ ಒಂದು ಹಡಗಿನಲ್ಲಿ ಪ್ರಯಾಣಿಸುತ್ತಿರುತ್ತಾನೆ. ಈ ಪ್ರಯಾಣದ ಸಂದರ್ಭದಲ್ಲಿ ಅತನು ಯು.ಕೆ. (U.K.) ಪ್ರಜೆಯಾದ 'B' ಎಂಬಾತನನ್ನು ಕೊಲ್ಲುತ್ತಾನೆ. 'A' ಯನ್ನು ಭಾರತೀಯ ನ್ಯಾಯಾಲಯದಲ್ಲಿ ಶಿಕ್ಷಿಸ ಬಹುದೆ ?

(ಬಿ) ಕರಾರಿನ ಕಾನೂನಿನ ಪ್ರಕಾರ "ನೀಡಿಕೆಯ ಇಚ್ಛೆ" ಮತ್ತು "ನೀಡಿಕೆಯ ಆಹ್ವಾನಕ್ಕೂ" ಇರುವ ವ್ಯತ್ಯಾಸವೇನು.

(ಸಿ) 'A' ಎಂಬಾತನು 'B' ಎಂಬಾತನಿಗೆ 500 ಅಥವಾ 1,000 ರೂ.ಗಳಿಗೆ ಒಂದು ಕುದುರೆಯನ್ನು ಮಾರುವುದಾಗಿ ಇಚ್ಛೆ ವ್ಯಕ್ತಪಡಿಸುತ್ತಾನೆ. ಈ ಕರಾರು ಜಾರಿಗೆ ಬರತಕ್ಕದ್ದೆ ?

(ಡಿ) *damnum sine injuria* ಇದನ್ನು ವಿವರಿಸಿ.

## PART B

*10×10=100*

*Answer each question in about 100 words. Each question carries 10 marks.*

2. Contrast the features of the offence of 'wrongful confinement' on one hand with the offence of 'Kidnapping/Abduction' on the other.

3. Abetment of an offence is a complete offence by itself. Whether an attempt to abet an offence would also be an offence ? Examine.

4. What is meant by negotiable instruments ? State the differences between Promissory note and Bill of exchange.

5. 'A' in the darkness of the night kills his son 'B' considering him as a tiger. Decide the liability of 'A'.

6. 'A' threatens to shoot 'B' if 'B' does not agree to sell his property to 'A' on a certain price. 'B' sells his property to 'A'. Is this contract valid ?

7. 'X' an industry is situated in thickly populated area, engaged in producing poisonous gas. Due to electricity short circuit gas leaks. It resulted in the death of 'Z' and his family ? Is 'X' liable for the tragedy ?

8. A Bill is payable to 'X' or to X's Order. A thief steals it from 'X' and forges the endorsement of 'X' and endorses the Bill to 'Z'. 'Z' takes in good faith and for value. Can 'Z' recover the Bill ?

9. State the features of offence of 'cruelty against married woman' in S 498A of IPC.

10. Distinguish between Libel and Slander. Whether the distinction holds good in India ?

11. State the scheme of the Dowry Prohibition Act, 1961. Whether the Act prohibits dowry or only makes the bride richer ?

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಒಂದು ಕಡೆ 'ಅಕ್ರಮ ಬಂಧನ'ದ ಅಪರಾಧಕ್ಕೂ, ಇನ್ನೊಂದು ಕಡೆ 'ವ್ಯಪಹರಣ/ಅಪಹರಣದ' ಅಪರಾಧಕ್ಕೂ ಇರುವ ವ್ಯತ್ಯಾಸಗಳೇನು ?

**3.** ಒಂದು ಅಪರಾಧದ ದುಷ್ಪ್ರೇರಣೆಯು ಸ್ವತಃ ಸಂಪೂರ್ಣ ಅಪರಾಧವಾಗಿರುತ್ತದೆ. ಒಂದು ಅಪರಾಧಕ್ಕೆ ದುಷ್ಪ್ರೇರಣೆ ಮಾಡುವ ಪ್ರಯತ್ನವೂ ಸಹ ಅಪರಾಧವೆನ್ನಿಸುತ್ತದೆಯೆ ? ಪರಿಶೀಲಿಸಿ.

**4.** ವರ್ಗಾವಣೆಯ ಲಿಖಿತ ಎಂದರೇನು ? ಪ್ರಾಮಿಸರಿ ಪತ್ರ ಮತ್ತು ಬಿಲ್ ಆಫ್ ಎಕ್ಸ್‌ಚೇಂಜ್‌ಗಳ ನಡುವಿನ ವ್ಯತ್ಯಾಸವನ್ನು ತಿಳಿಸಿ.

**5.** 'A' ಎಂಬುವನು ಕತ್ತಲಲ್ಲಿ ಹುಲಿ ಎಂದು ಭಾವಿಸಿ ತನ್ನ ಮಗ 'B' ಯನ್ನು ಕೊಲ್ಲುತ್ತಾನೆ. ಇಲ್ಲಿ 'A' ಯ ಹೊಣೆಗಾರಿಕೆಯನ್ನು ನಿರ್ಧರಿಸಿ.

**6.** ನಿರ್ದಿಷ್ಟ ಬೆಲೆಗಾಗಿ 'B' ಯು ಆಸ್ತಿಯನ್ನು ತನಗೆ ಮಾರಲು ಒಪ್ಪದಿದ್ದರೆ ಅತನನ್ನು ಗುಂಡಿಕ್ಕಿ ಕೊಲ್ಲುವುದಾಗಿ 'A' ಹೆದರಿಸುತ್ತಾನೆ. 'A' ಗೆ 'B' ತನ್ನ ಆಸ್ತಿಯನ್ನು ಮಾರುತ್ತಾನೆ. ಈ ಕರಾರು ಸಿಂಧುವೆ ?

**7.** 'X' ಎಂಬ ಕೈಗಾರಿಕೆಯು ಜನನಿಬಿಡವಾದ ಪ್ರದೇಶದಲ್ಲಿದ್ದು ವಿಷಕಾರಿಯಾದ ಅನಿಲದ ಉತ್ಪಾದನೆಯಲ್ಲಿ ತೊಡಗಿದೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಅನಿಲದ ಸೋರಿಕೆಯಾಗುತ್ತದೆ. ಇದರಿಂದಾಗಿ 'Z' ಮತ್ತು ಅತನ ಕುಟುಂಬ ಸಾವಿಗೀಡಾಗುತ್ತಾರೆ. ಈ ದುರಂತಕ್ಕೆ 'X' ಹೊಣೆಯಾಗುತ್ತದೆಯೆ ?

**8.** 'X' ಅಥವಾ 'X' ನ ಆದೇಶಕ್ಕೆ ಒಂದು ಬಿಲ್ಲು ಸಂದಾಯವಾಗ ಬೇಕಿರುತ್ತದೆ. ಒಬ್ಬ ಕಳ್ಳನು ಅದನ್ನು 'X' ನಿಂದ ಕದ್ದು 'X' ನ ಹಿಂಬರಹವನ್ನು ನಕಲು ಮಾಡಿ ಅದನ್ನು 'Z' ಗೆ ಕೊಡುತ್ತಾನೆ. ನಂಬಿಕೆಯ ಮೇಲೆ ಅದನ್ನು ಮೌಲ್ಯದ ಪ್ರಕಾರ 'Z' ಸ್ವೀಕರಿಸುತ್ತಾನೆ. ಈ ಬಿಲ್ಲನ್ನು 'Z' ವಸೂಲಿ ಮಾಡಿಕೊಳ್ಳಬಹುದೆ ?

**9.** IPC ಯ s 498A ಪ್ರಕಾರ "ವಿವಾಹಿತ ಮಹಿಳೆಯ ಮೇಲಿನ ಕ್ರೌರ್ಯ" ಎಂಬ ಅಪರಾಧದ ಸ್ವರೂಪವನ್ನು ವಿವರಿಸಿ.

**10.** ಮಾನಹಾನಿಕರ ಲೇಖನ ಮತ್ತು ಸುಳ್ಳು ಆರೋಪ (Slander) ಗಳ ವ್ಯತ್ಯಾಸವನ್ನು ತಿಳಿಸಿ. ಭಾರತದಲ್ಲಿ ಈ ವ್ಯತ್ಯಾಸ ಅನ್ವಯಿಸುತ್ತದೆಯ ?

**11.** ವರದಕ್ಷಿಣೆ ನಿಷೇಧ ಕಾಯಿದೆ 1961, ಇದರ ಯೋಜನೆಯನ್ನು ವಿವರಿಸಿ. ಈ ಕಾಯಿದೆಯು ವರದಕ್ಷಿಣೆಯನ್ನು ನಿಷೇಧಿಸುತ್ತದೆಯೇ ಅಥವಾ ವಧುವನ್ನು ಇನ್ನಷ್ಟು ಶ್ರೀಮಂತಳನ್ನಾಗಿ ಮಾಡುವುದೆ ?

[Turn over

## PART C

*6×15=90*

*Answer each question in about 150 words. Each question carries 15 marks.*

**12.** Briefly state the essential features of offence of theft, and extortion of property. When does the offence become robbery and dacoity ?

**13.** What is meant by "*Res Ipsa Loquitur*" under tort of negligence ? How does it affect the tort of negligence ?

**14.** Explain the meaning of "Acts done by several persons in furtherance of common intention of all" found in S 34 of IPC. Distinguish it from "being member of unlawful assembly in prosecution of the common object" in Section 149 of IPC.

**15.** What is agency ? What are the modes of termination of agency ?

**16.** What is meant by dishonour of cheque ? What are the recent amendments made to tackle dishonour of cheques ?

**17.** What is meant by 'privity of contract' doctrine ? What is its position in India ?

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಕಳವಿನ ಅಪರಾಧ ಮತ್ತು ಸಂಪತ್ತಿನ ಸುಲಿಗೆಯ ಮೂಲ ಲಕ್ಷಣಗಳೇನು ? ಒಂದು ಅಪರಾಧವು ಯಾವಾಗ ದರೋಡೆ ಮತ್ತು ಡಕಾಯಿತಿ ಎನಿಸಿಕೊಳ್ಳುತ್ತದೆ ?

**13.** ನಿರ್ಲಕ್ಷ್ಯದ ಅಪಕೃತ್ಯದ ಪ್ರಕಾರ "Res Ipsa Loquitur" ಎಂದರೇನು ? ಇದು ನಿರ್ಲಕ್ಷ್ಯದ ಅಪಕೃತ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ?

**14.** IPC ಯ s 34 ರಲ್ಲಿ ಕಂಡು ಬರುವ "ಎಲ್ಲರ ಸಮಾನ ಉದ್ದೇಶದ ಸಾಧನೆಗಾಗಿ ಅನೇಕ ವ್ಯಕ್ತಿಗಳು ಮಾಡಿದ ಕೃತ್ಯಗಳು" ಎಂಬುದರ ಅರ್ಥವನ್ನು ವಿವರಿಸಿ. IPC ಯ 149 ನೇ ಪರಿಚ್ಛೇದದಲ್ಲಿರುವ "ಸಮಾನ ಉದ್ದೇಶಕ್ಕಾಗಿ ಕಾನೂನು ಬಾಹಿರ ಗುಂಪಿನ ಸದಸ್ಯನಾಗಿರುವುದು". ಎಂಬುದರಿಂದ ಇದು ಹೇಗೆ ಭಿನ್ನ ಎಂಬುದನ್ನು ತಿಳಿಸಿ.

**15.** ಏಜೆನ್ಸಿ ಎಂದರೇನು ? ಏಜೆನ್ಸಿಯನ್ನು ಕೊನೆಗಾಣಿಸುವ ವಿಧಾನಗಳು ಯಾವುವು ?

**16.** ಚೆಕ್ ಅನಾದರಣೆಯಾಗಿದೆ (dishonour) ಎಂದರೆ ಏನು ಅರ್ಥ ? ಚೆಕ್‌ಗಳು ಅನಾದರಣೆಯಾಗುವ ಸಮಸ್ಯೆಯನ್ನು ನಿಭಾಯಿಸುವುದಕ್ಕಾಗಿ ಇತ್ತೀಚೆಗೆ ಮಾಡಿರುವ ತಿದ್ದುಪಡಿಗಳು ಯಾವುವು ?

**17.** "ಕರಾರಿಗೆ ಭಾಗಿಯಾಗಿರುವುದು" ಸಿದ್ಧಾಂತ ಎಂದರೇನು ? ಭಾರತದಲ್ಲಿ ಇದರ ಸ್ಥಿತಿ ಕುರಿತು ವಿವರಿಸಿ.

[Turn over

## PART D

*3×30=90*

*Answer any* ***three*** *of the following questions, each in about 300 words. Each question carries 30 marks.*

**18.** Answer in brief the following :

(a) List the 'offences against body' under IPC grading them from lesser offence with lesser penalties to higher offences leading to highest penalty.

(b) State briefly the distinguishing features of 'culpable homicide' and 'murder'.

**19.** (a) Explain '*actus non facit reum nisi mens sit rea*' as an element for liability under IPC. Mention the method of determining intention. Contrast it with requirement under the Prevention of Food Adulteration Act, 1954.

(b) Write a comment on 'dowry death' even though it may be culpable homicide' or 'murder', but with a lesser penalty and assumption of guilt as also rules of proof.

**20.** (a) State the meaning and effect of the principle that "time is the essence of the contract" and the consequences thereof.

(b) What do you understand by breach of contract under Sec. 73 ? What are principles governing damages ?

**21.** (a) In the changing scenario the judicial decisions have indicated that exceptions to "*caveat emptor*" doctrine are becoming more important. Comment, and illustrate with relevant cases.

(b) Substantiate that the Consumer Protection Act, 1986 has now introduced 'supremacy of consumer' (*caveat venditor*).

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

**18.** ಈ ಕೆಳಗಿನವುಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :

(ಎ) ಐ.ಪಿ.ಸಿ.ಯಲ್ಲಿ ದರ್ಜೆ ವಿಂಗಡಿಸಿರುವ ಪ್ರಕಾರ ಅಂದರೆ ಕಡಿಮೆ ಪ್ರಮಾಣದ ಅಪರಾಧಗಳಿಗೆ ಕಡಿಮೆ ದಂಡಗಳು, ಅಧಿಕ ಪ್ರಮಾಣದ ಅಪರಾಧಗಳಿಗೆ ಅಧಿಕ ದಂಡಗಳು, ಇದರಂತೆ "ಮಾನವ ದೇಹದ ಮೇಲಿನ ಅಪರಾಧಗಳ"ನ್ನು ಪಟ್ಟಿ ಮಾಡಿ.

(ಬಿ) 'ಅಪರಾಧಿಕ ನರಹತ್ಯೆ' ಮತ್ತು 'ಕೊಲೆ' ಇವುಗಳ ನಡುವಿನ ವ್ಯತ್ಯಾಸವನ್ನು ಸಂಕ್ಷಿಪ್ತವಾಗಿ ತಿಳಿಸಿ.

**19.** (ಎ) ಐ.ಪಿ.ಸಿ.ಯ ಪ್ರಕಾರ ಹೊಣೆಗಾರಿಕೆಗೆ ಗುರಿಯಾಗುವ ಅಂಶವಾಗಿ *'actus non facit reum nisi mens sit rea'* ವನ್ನು ವಿವರಿಸಿ. ಆಶಯ (Intention) ವನ್ನು ನಿರ್ಧರಿಸುವ ವಿಧಾನವನ್ನು ತಿಳಿಸಿ. ಆಹಾರ ಕಲಬೆರಕೆ ತಡೆಗಟ್ಟುದ ಅಧಿನಿಯಮ, 1954 ರ ಅಗತ್ಯತೆಗಳಿಗೂ ಇದಕ್ಕೂ ಇರುವ ವೈದೃಶ್ಯವನ್ನು ತಿಳಿಸಿ.

(ಬಿ) 'ಅಪರಾಧಿಕ ನರಹತ್ಯೆ' ಅಥವಾ 'ಕೊಲೆ' ಆಗಿರಬಹುದಾದರೂ ಸಹ 'ವರದಕ್ಷಿಣೆ ಸಾವಿ'ಗೆ ಕಡಿಮೆ ದಂಡ ವಿಧಿಸಲಾಗುತ್ತದೆ ಮತ್ತು ದೋಷದ ಗ್ರಹಿಕೆಯನ್ನೇ ರುಜುವಾತಿನ ನಿಯಮಗಳು ಎಂದು ಪರಿಗಣಿಸಲಾಗುತ್ತದೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.

**20.** (ಎ) "ಸಮಯವು ಕರಾರಿನ ಮುಖ್ಯಾಂಶವಾಗಿದೆ" ಎಂಬ ತತ್ವದ ಅರ್ಥ ಮತ್ತು ಪರಿಣಾಮವನ್ನು ತಿಳಿಸಿ ಹಾಗೂ ಅದರಿಂದಾಗುವ ಪರಿಣಾಮಗಳನ್ನು ನಿರೂಪಿಸಿ.

(ಬಿ) 73ನೇ ಪರಿಚ್ಛೇದದ ಪ್ರಕಾರ ಕರಾರು ಉಲ್ಲಂಘನೆ ಎಂದರೇನು ? ನಷ್ಟಗಳಿಗೆ ಅನ್ವಯಿಸುವ ನಿಯಮಗಳು ಯಾವುವು ?

**21.** (ಎ) ಬದಲಾಗುತ್ತಿರುವ ಸನ್ನಿವೇಶದಲ್ಲಿ *"caveat emptor"* ಸಿದ್ಧಾಂತದ ಅಪವಾದಗಳು ಬಹಳ ಮುಖ್ಯವಾಗುತ್ತಿವೆ ಎಂಬುದನ್ನು ನ್ಯಾಯಿಕ ನಿರ್ಣಯಗಳು ಸೂಚಿಸಿವೆ. ಸಂಬಂಧಪಟ್ಟ ಪ್ರಕರಣಗಳ ಉದಾಹರಣೆಗಳೊಂದಿಗೆ ಇದನ್ನು ವ್ಯಾಖ್ಯಾನಿಸಿ.

(ಬಿ) 1986ರ ಗ್ರಾಹಕರ ರಕ್ಷಣಾ ಕಾಯಿದೆಯು ಈಗ "ಗ್ರಾಹಕರ ಸರ್ವೋಚ್ಚತೆ" *(caveat venditor)* ಯನ್ನು ಜಾರಿಗೊಳಿಸಿದೆ ಎಂಬುದನ್ನು ಸಮರ್ಥಿಸಿ.

[Turn over

**22.** (a) Explain the concept of 'State Liability'.
Whether the State is liable when a private vehicle suffers damages in collision with

I. an army truck carrying Jawans towards frontier positions.

II. an army truck carrying food for Jawans on duty.

III. a vehicle of Karnataka Government engaged in sanitary work.

(b) Discuss the concept of vicarious liability of master for actions of an employee. Explain the various tests evolved by Courts.

22. (ಎ) 'ರಾಜ್ಯದ ಹೊಣೆಗಾರಿಕೆ' ಯ ಪರಿಕಲ್ಪನೆಗಳನ್ನು ವಿವರಿಸಿ.
ಈ ಕೆಳಕಂಡ ಸಂದರ್ಭಗಳಲ್ಲಿ ಖಾಸಗಿ ವಾಹನವೊಂದು ಡಿಕ್ಕಿ ಹೊಡೆದು ಜಖಂ ಗೊಂಡಾಗ ರಾಜ್ಯವು ಹೊಣೆಯಾಗುತ್ತದೆಯೆ ಎಂಬುದನ್ನು ತಿಳಿಸಿ.

I. ದೇಶದ ಗಡಿಯ ಸ್ಥಾನಗಳಿಗೆ ಸೈನಿಕರನ್ನು ಕರೆದೊಯ್ಯುತ್ತಿರುವ ಸೇನೆಯ ಟ್ರಕ್ಕಿಗೆ ಡಿಕ್ಕಿ ಹೊಡೆದಾಗ.

II. ಕರ್ತವ್ಯದಲ್ಲಿರುವ ಸೈನಿಕರಿಗಾಗಿ ಆಹಾರವನ್ನು ಒಯ್ಯುತ್ತಿರುವ ಸೇನೆಯ ಟ್ರಕ್ಕಿಗೆ ಡಿಕ್ಕಿ ಹೊಡೆದಾಗ.

III. ನೈರ್ಮಲ್ಯ ಕೆಲಸದಲ್ಲಿ ತೊಡಗಿರುವ ಕರ್ನಾಟಕ ಸರ್ಕಾರದ ವಾಹನಕ್ಕೆ ಡಿಕ್ಕಿ ಹೊಡೆದಾಗ.

(ಬಿ) ಉದ್ಯೋಗಿಯೊಬ್ಬರ ಕೃತ್ಯಗಳಿಗಾಗಿ ಒಡೆಯನ ಬದಲಿ ಹೊಣೆಯ ಪರಿಕಲ್ಪನೆಯನ್ನು ಕುರಿತು ಚರ್ಚಿಸಿ. ನ್ಯಾಯಾಲಯಗಳು ರೂಪಿಸಿರುವ ವಿವಿಧ ಪರೀಕ್ಷಣೆಗಳನ್ನು ವಿವರಿಸಿ.

11/2

# 2010

## ಕಾನೂನು

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

**ಸೂಚನೆಗಳು**

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

**SEAL**

***Note :*** *The English version of the instructions is printed on the front cover of this question paper.*